# ಪ್ರಗತಿಶೀಲ ಕಥೆಗಳು ಕಯ್ಯಾರರ 'ಅನ್ನದೇವರು ಮತ್ತು ಇತರ ಕಥೆಗಳು'



ಬಿ. ಜನಾರ್ದನ ಭಟ್

ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿಗೆ ಗೊತ್ತುಗುರಿಗಳು ನಿರ್ಧಾರವಾಗುವ ಮುನ್ನವೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ಪ್ರಗತಿಶೀಲ ಸಂಕಲನಗಳು ಮತ್ತು ಒಂದು ಆಂಥಾಲಜಿ ಪ್ರಕಟವಾಗಿದ್ದವು. ಪ್ರಗತಿಶೀಲತೆ ಒಂದು ಸಾಹಿತ್ಯಕ ಪಂಥವಾಗಿ ಕನ್ನಡದಲ್ಲಿ ಸ್ಥಾಪನೆಯಾದುದು 1943ರಲ್ಲಿ. ಆದರೆ ಅದಕ್ಕಿಂತ ಮುಂಚೆಯೇ ದಕ್ಷಿಣ ಕನ್ನಡದಲ್ಲಿ ಈ ಪಂಥಕ್ಕೆ ಸೇರುವ ಕಥೆಗಳು ಪ್ರಕಟವಾಗಿವೆ. 1938ರಲ್ಲಿ (ಅಥವಾ ಮುಂಚೆ) ಪ್ರಕಟವಾದ ಕೊರಡ್ಕಲ್ ಶ್ರೀನಿವಾಸ ರಾಯರು ಬರೆದ ಬಡವರ ಶೋಷಣೆಯ ಕಥೆ 'ಧನಿಯರ ಸತ್ಯನಾರಾಯಣ' ಇಂಥಹ ಒಂದು ಪ್ರಸಿದ್ಧ ಕಥೆ. ಕೊರಡ್ಕಲ್ ಶ್ರೀನಿವಾಸ ರಾಯರ 'ನಂದಾದೀಪ' (1938) ಸಂಕಲನದಲ್ಲಿ ಇನ್ನೂ ಎರಡು ಪ್ರಗತಿಶೀಲ ಕಥೆಗಳಿವೆ –'ಬಾಲಕೃಷ್ಣನಿಗೆ ನೈವೇದ್ಯ' ಮತ್ತು 'ನಂದಾದೀಪ'. ಶಿವರಾಮ ಕಾರಂತರ 'ಹಸಿವು' (1931) ಸಂಕಲನದ 'ಹೋಳಿಗೆ' ಕಥೆಯೂ ಒಂದು ಆದ್ಯ ಪ್ರಗತಿಶೀಲ ಕಥೆಯೇ ಆಗಿದೆ. ಆ ಸಂಕಲನದಲ್ಲಿ ಕಾರಂತರು 'ಊರಿನಲ್ಲಿ ದೊಡ್ಡವರು ಮತ್ತು ಬಡವರು ಎಂದು ಎರಡು ಜಾತಿಯ ಜನರು' ಎಂದು ಖಚಿತವಾದ ನಿಲುವಿನಿಂದ ಕಥೆಗಳನ್ನು ಬರೆದಿದ್ದಾರೆ. ಜಮೀನುದಾರೀ ವರ್ಗ ಮತ್ತು ಪುರೋಹಿತ ವರ್ಗಗಳು ಬಡವರನ್ನು ಶೋಷಿಸುವ ತಾತ್ವಿಕ ಚಿಂತನೆಯುಳ್ಳ ಇನ್ನು ಕೆಲವು ಕಥೆಗಳು ಈ ಸಂಕಲನದಲ್ಲಿವೆ.

ಕಯ್ಯಾರ ಕಿಂಞಣ್ಣ ರೈ ಅವರು (1915–2015) 1941ರಲ್ಲಿ ಪ್ರಕಟಿಸಿದ 'ಅನ್ನ ದೇವರು ಮತ್ತು ಇತರ ಕಥೆಗಳು' (ಕಿರಿಯರ ಪ್ರಪಂಚ, ಉಡುಪಿ. ಬೆಲೆ:1-0-0. ಪುಟಗಳು: 126) ಒಂದು ಆದ್ಯ ಪ್ರಗತಿಶೀಲ ಕಥಾಸಂಕಲನವಾಗಿದೆ. ಇವೆಲ್ಲ ಪತ್ರಿಕೆಗಳಲ್ಲಿ ಮೊದಲೇ ಪ್ರಕಟವಾದ ಕಥೆಗಳು ಎಂದು ಲೇಖಕರು 'ನನ್ನ ಮಾತಿ'ನಲ್ಲಿ ಹೇಳಿದ್ದಾರೆ. ಕಯ್ಯಾರ